**ಸಾಕ್ಷಿಯನ್ನು ದಿನಾಂಕಃ 19-11-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಮಗು ಮೃತಪಟ್ಟಿದ್ದರಿಂದ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ರಿಕ್ಷಾ ಚಾಲಕ ಆಟೋಗೆ ಬ್ರೆಕ್ ಹಾಕಿದ್ದರಿಂದ ಆಟೋ ಪಲ್ಟಿಯಾಗಿದ್ದ ಕಾರಣಕ್ಕೆ ಅಪಘಾತ ಆಗಿದ್ದು ರಿಕ್ಷಾ ಚಾಲಕನ ತಪ್ಪಿನಿಂದಲೇ ಸದರಿ ಅಪಘಾತವಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್. ನಾಯ್ಕರಿಂದಃ**

ಆಟೋ ಸ್ಟಾಂಡ್‌ನಿಂದ ಸುಮಾರು 2 ಕಿಲೋಮೀಟರ್ ಹೋದ ನಂತರ ಅಪಘಾತವಾಗಿರುತ್ತದೆ. ನಾವು ರಿಕ್ಷಾದಲ್ಲಿ ಹೊಗುತ್ತಿದ್ದಾಗ ರಿಕ್ಷಾ ಚಾಲಕ ರಿಕ್ಷಾವನ್ನು ನಿಧಾನವಾಗಿ ಓಡಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿ. ರಸ್ತೆಯಲ್ಲಿ ಮಗು ಏಕಾ ಏಕಿ ರಸ್ತೆಗೆ ಬಂದಿದ್ದರಿಂದ ಮಗುವಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಚಾಲಕ ಬ್ರೆಕ್ ಹಾಕಿರುತ್ತಾನೆ ಎಂದರೆ ಸರಿ. ಮಗು ರಸ್ತೆಗೆ ಅಡ್ಡ ಬರದಿದ್ದರೆ ಯಾವುದೇ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿ. ನನಗೆ ಕನ್ನಡ ಬರೆಯಲು ಬರುವುದಿಲ್ಲ. ಪರಿಹಾರಕ್ಕೋಸ್ಕರ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**